ಕರ್ನಾಟಕ ವಿಧಾನಸಭೆ

(13ನೇ ವಿಧಾನಸಭೆ – 3ನೇ ಅಧಿವೇಶನ)

ಸೋಮವಾರ 14ನೇ ಸೆಪ್ಟೆಂಬರ್ 2009ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತ್ತು. ಅಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್ ರವರು ಪೀಠವನ್ನು ಅಲಂಕರಿಸಿದ್ದರು.

11.00 A.M.

ಅಧ್ಯಕ್ಷರು: ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಇದುವರೆಗೆ ಏನು ಚರ್ಚೆ ನಡೆಯಿತು ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡಬೇಕು. ಇದರ ಬಗ್ಗೆ further discussion ಬೇಡ. ಮೊನ್ನೆ ತಾವೆಲ್ಲಾ ಮಾತುಕೊಟ್ಟಿದ್ದೀರಿ. ಅಂದು ರಾತ್ರಿ 9.30 ಗಂಟೆಯವರೆಗೆ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ಇಂದು ಬೆಳಿಗ್ಗೆ ಮುಖ್ಯಮಂತ್ರಿಯವರು ಉತ್ತರ ಕೊಡಬೇಕೆಂದು ನಿರ್ಣಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಉತ್ತರದ ನಂತರ ತಮ್ಮ adjournment motionನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಇನ್ನೂ ನಾಳೆ ಮತ್ತು ನಾಡಿದ್ದು ಅಧಿವೇಶನವಿದೆ. ಖಂಡಿತ ಅದಕ್ಕೆ ಅವಕಾಶ ಕೊಡುತ್ತೇನೆ. ಆದರೆ, ಇವತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯ ಮುಗಿದುಹೋಗಲಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನಾನು, ಜಯಚಂದ್ರರವರು ಮತ್ತು ಅನೇಕ ಜನ ಸದಸ್ಯರುಗಳು ತಮಗೆ ಕೆ.ಐ.ಎ.ಡಿ.ಬಿ.ಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಚರ್ಚೆ ಮಾಡಬೇಕೆಂದು ಒಂದು ನೋಟೀಸ್‌ನ್ನು ಕೊಟ್ಟಿದ್ದೇವೆ. ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಅದಕ್ಕೂ ಮೊದಲು ನಾವು ಇದರ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್‌ನ್ನು ಮಾಡುತ್ತೇನೆ. ಅನಂತರ ನೀವು ಏನು ತೀರ್ಮಾನ ಮಾಡಿತ್ತೀರೋ ಅದರಂತೆ ಮಾಡೋಣ.

ಅಧ್ಯಕ್ಷರು: ತಾವು ಕೊಟ್ಟಿರುವ ನೋಟಿಸ್ ಮತ್ತು ಅವರು ಕೊಟ್ಟಿರುವ ನೋಟಿಸ್ ಇದೆ. ಇಲ್ಲವೆಂದು ನಾನು ಹೇಳಲಿಲ್ಲ. ಆದರೆ, ವಿರೋಧ ಪಕ್ಷದ

ನಾಯಕರಲ್ಲಿ ನಾನು ವಿನಂತಿ ಮಾಡಿಕೊಳ್ಳುವಂಥದ್ದು, ಪ್ರಿಲಿಮಿನರಿ ಸಬ್‌ಮಿಷನ್ ಎಂದರೆ ಹೆಚ್ಚುಕಡಿಮೆ ಚರ್ಚೆಯೇ ಪ್ರಾರಂಭವಾದಂತೆ.

ಶ್ರೀ ಸಿದ್ದರಾಮಯ್ಯ: ಇಲ್ಲ.

ಅಧ್ಯಕ್ಷರು: ಹೌದು. ಏಕೆಂದರೆ ಇದುವರೆಗೆ adjournment motionದ್ದು ಏನೇನಾಗಿದೆ ಎಂಬುದು ನನಗೆ ಎಲ್ಲಾ ಗೊತ್ತಿದೆ. ನೀವು ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೂ ಅವಕಾಶ ಕೊಡುತ್ತೇನೆ. ಮುಂದೆ ಯಾವ ರೀತಿಯಾಗಿ ಅದರ ಬಗ್ಗೆ ಚರ್ಚೆಯನ್ನು ಮುಂದುವರೆಸಬೇಕು ಎಂಬುದಕ್ಕೂ ನಾನು ಅವಕಾಶ ಕೊಡುತ್ತೇನೆ. ಆದ್ದರಿಂದ ನೀವು ನನಗೆ ಸ್ವಲ್ಪ ಸಹಕಾರ ಕೊಡಿ. ಮೊದಲು ಮಾನ್ಯ ಮುಖ್ಯಮಂತ್ರಿಯವರು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ಉತ್ತರವನ್ನು ಕೊಡಲಿ. ಆ ವಿಚಾರವನ್ನು ಮೊದಲು ಕ್ಲೋಸ್ ಮಾಡೋಣ. ಬರಗಾಲದ ಬಗ್ಗೆಯೂ ತಾವು adjournment motionನ್ನು ಕೊಟ್ಟಿದ್ದೀರಿ. ಅದನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿ ಇವತ್ತೇ ಚರ್ಚೆಗೆ ಇಟ್ಟಿದ್ದೇನೆ. ಆದ್ದರಿಂದ ಒಂದೊಂದೇ subjectನ್ನು ಕ್ಲೋಸ್ ಮಾಡಿಕೊಂಡು ಹೋಗೋಣ.

ಶ್ರೀ ಸಿದ್ದರಾಮಯ್ಯ: ಹೆಬ್ಬಗೋಡಿ ಹತ್ತಿರ ಚರ್ಚ್ ಮೇಲೆ ನಡೆದಿರುವ ದಾಳಿಯ ಬಗ್ಗೆ ಇಲ್ಲಿ ಬೆಳಿಗ್ಗೆ ಉತ್ತರ ಕೊಡುತ್ತೇವೆಂದು ಹೇಳಿದ್ದರು. ಮುಖ್ಯಮಂತ್ರಿಗಳು ಹೊರಗಡೆಯೇ ಅನೇಕ ವಿಚಾರಗಳನ್ನು ಹೇಳುತ್ತಿದ್ದಾರೆ. ಆದರೆ, ವಿಧಾನಸಭೆಯಲ್ಲಿ ಅವರು ಉತ್ತರವನ್ನು ಕೊಟ್ಟಿಲ್ಲ. ನಾವು ಆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅವತ್ತು ನಾನು ಅದರ ಬಗ್ಗೆ ಉತ್ತರ ಕೊಡಲು ಸಿದ್ದವಾಗಿದ್ದೆ. ಆದರೆ ತಾವೇ ಸೋಮವಾರ ಉತ್ತರ ಕೊಡಿಯೆಂದು ಹೇಳಿದಿರಿ.

ಶ್ರೀ ಸಿದ್ದರಾಮಯ್ಯ: ತಾವು ಉತ್ತರ ಕೊಡಿ. ಆದರೆ ಎಲ್ಲವನ್ನು ಹೊರಗಡೆಯೇ ಹೇಳಿಕೊಂಡು ಕುಳಿತುಕೊಂಡರೆ ಹೇಗೆ? ಇದಕ್ಕೆ ವಿರೋಧ ಪಕ್ಷದವರೇ ಕಾರಣ.....

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು): ನೀವೂ ಹೊರಗಡೆ ಹೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ: ನಾವು ಹೇಳುವುದು ಬೇರೆ. ಸರ್ಕಾರ ನಡೆಸುವವರು ನೀವು. ಆದ್ದರಿಂದ ಉತ್ತರ ಕೊಡಬೇಕಾಗಿರುವವರು ನೀವು. ನಾನಲ್ಲಾ. It is your responsibility.

ಅಧ್ಯಕ್ಷರು: ಇದರ ಬಗ್ಗೆ ಮೊನ್ನೆ statement ಮಾಡುತ್ತೇನೆಂದು ಹೇಳಿದ್ದರು. ಇವತ್ತು ಅದನ್ನೂ ಮಾಡುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿಚಾರ ಇದೆ.

ಅಧ್ಯಕ್ಷರು: ಹೌದು ನಿಮ್ಮದೂ ಮತ್ತು ಅವರದ್ದೂ ನಿಲುವಳಿ ಸೂಚನೆ ಬಂದಿದೆ. ಮಾನ್ಯ ಮುಖ್ಯಮಂತ್ರಿಯವರ ಉತ್ತರ ಆದಮೇಲೆ ಅವರದ್ದು ಮತ್ತು ನಿಮ್ಮದು ಎರಡನ್ನೂ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ: ಆಗಲಿ.

1. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ಕಳೆದ ಮೂರು ದಿವಸಗಳಿಂದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಅತ್ಯಂತ ಅರ್ಥಪೂರ್ಣ ಚರ್ಚೆಯಾಗಿ, ಪ್ರತಿಪಕ್ಷದ ನಾಯಕರು ಮತ್ತು ಉಪನಾಯಕರು, ರೇವಣ್ಣನವರು, ಆ ಕಡೆ ಮತ್ತು ಈ ಕಡೆ ಇರುವಂಥ ಎಲ್ಲಾ ಸದಸ್ಯರುಗಳು ಮನಬಿಚ್ಚಿ ಮಾಡನಾಡಿದ್ದಾರೆ. ಅನೇಕ ಉಪಯುಕ್ತ ಸಲಹೆಗಳನ್ನೂ ಕೊಟ್ಟಿದ್ದಾರೆ. ಸದನ ಸೇರುವ ಮೊದಲು ಏನು ಒಪ್ಪಂದ ಆಗಿತ್ತು ಆ ರೀತಿ ಕಾರ್ಯಕಲಾಪ ನಡೆಯುವುದಕ್ಕೆ ಪ್ರತಿಪಕ್ಷದ ನಾಯಕರು ಮತ್ತು ನೀವೆಲ್ಲಾ ಸಹಕಾರ ಕೊಟ್ಟಿದ್ದೀರಿ. ಒಳ್ಳೆಯ ಸಂಪ್ರದಾಯ. ನಾವು ಅಧಿಕಾರಕ್ಕೆ ಬಂದ 14 ತಿಂಗಳ ನಂತರ ಈ ಸಂದರ್ಭದಲ್ಲಿ ಜನರು ಮೆಚ್ಚುವ ರೀತಿಯಲ್ಲಿ, ಒದೊಂದು ನಿಮಿಷವೂ ವ್ಯರ್ಥವಾಗದ ರೀತಿಯಲ್ಲಿ ಚರ್ಚೆಯಾಗಿದೆ. ಅದಕ್ಕಾಗಿ ನಾನು ನಿಮಗೆಲ್ಲಾ ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪ್ರಾರಂಭದ ದಿವಸ ಈ ಚರ್ಚೆಗೆ ಅವಕಾಶ ಸಿಗದೆ ಅಡ್ಡಿಯಾಗುತ್ತಿದೆಯೋ ಎಂಬ ಭಾವನೆಯಿಂದ ನಾನು ಸ್ವಲ್ಪ ಆವೇಶಗೊಂಡು ದುಃಖ ಉಮ್ಮಳಿಸಿದ್ದು ನಿಜ. ಆದರೆ, ಇವತ್ತು ಅತ್ಯಂತ ಆನಂದ, ತೃಪ್ತಿ, ಸಮಾಧಾನದಿಂದ ಒಬ್ಬ ರೈತನ ಮಗನಾಗಿ ಉತ್ತರವನ್ನು ಇಲ್ಲಿ ನಿಂತುಕೊಂಡು ಕೊಡುತ್ತಿದ್ದೇನೆ. ನನಗೆ ಆಸೆ ಇದೆ, ನಮ್ಮ ಅಧ್ಯಕ್ಷರು ಮತ್ತು ಪ್ರತಿಪಕ್ಷದ ನಾಯಕರು ಸಹಕಾರ